

# ಕನ್ನಂಗಿಯಲ್ಲಿ ಆರ್ಕಿಡ್ ರಂಗು

**ತೀರ್ಥಹಳ್ಳಿ ಸಮೀಪದ ಕನ್ನಂಗಿ ಗ್ರಾಮದ ಆಶಾ ಅವರ ಸಸ್ಯೋದ್ಯಾನ ವಿಶಿಷ್ಟ ತರುಲತೆಗಳಿಂದ ಸಹೃದಯರ ಗಮನಸೆಳೆಯುತ್ತದೆ.**

■ ವಿ. ಬಾಲಕೃಷ್ಣ ಶಿರ್ವ

'ಆರ್ಕಿಡಾಸಿಯಾ' (ಆರ್ಕಿಡೇಸಿ) ಕುಟುಂಬಕ್ಕೆ ಸೇರಿದ ಆರ್ಕಿಡ್ ಗಿಡಗಳು, ಅದ್ಭುತ ಕಲಾಕಾರನ ಕುಂಚದಿಂದ ರೂಪುಗೊಂಡ ಕಲಾಕೃತಿಗಳಂತೆ ಮನಸೆಳೆಯುತ್ತವೆ. ಮೂರರಿಂದ ಆರು ತಿಂಗಳ ತನಕ ತಾಜಾತನ ಉಳಿಸಿಕೊಳ್ಳುವ ಸುವಾಸನೆ ಬೀರುವ ಆರ್ಕಿಡ್ ಅತ್ಯಾಕರ್ಷಕ ಎಂಬುದರಲ್ಲಿ ಎರಡು ಮಾತಿಲ್ಲ.

ತೀರ್ಥಹಳ್ಳಿಯಿಂದ ಶಿವಮೊಗ್ಗಕ್ಕೆ ಹೋಗುವ ದಾರಿಯಲ್ಲಿ ಬೆಜ್ಜವಳ್ಳಿಯಿಂದ ಎಡಬದಿಗೆ ತಿರುವು ಪಡೆದು, ಸುಮಾರು 4 ಕಿ.ಮೀ. ಪಯಣಿಸಿದರೆ ಕನ್ನಂಗಿ ಎಂಬ ಪುಟ್ಟ ಗ್ರಾಮ ಸಿಗುತ್ತದೆ. ಅಲ್ಲಿಗೆ ಸ್ವಲ್ಪದೂರದಲ್ಲೇ ಆಶಾ ಶೇಷಾದ್ರಿ ಅವರ ಉದ್ಯಾನ ರೂಪುಗೊಂಡಿದೆ.

ಆಶಾ ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ ಕಲಿತಿದ್ದರೂ, ಈಗ ತೊಡಗಿಕೊಂಡಿರುವುದು ಸಸ್ಯಸಮಾಜದಲ್ಲಿ. ಜರ್ಬೆರಾ, ಕಾರ್ನೇಷನ್, ಆಂಥೋರಿಯಮ್ ಸೇರಿದಂತೆ ಹಲವು ಬಗೆಯ ಚೆಲುವಿನ ತರುಲತೆಗಳು ಅವರ ಕೈತೋಟದಲ್ಲಿ ಸ್ಥಾನಪಡೆದಿವೆ. ಆರ್ಕಿಡ್‌ಗಳಿಂದಾಗಿ ಅವರ ಸಸ್ಯೋದ್ಯಾನ ಹೊಸ ಕಳೆ ಪಡೆದುಕೊಂಡಿದೆ.

ಕುಂಡಗಳಲ್ಲಿ, ಹಲಗೆಯ ಪೆಟ್ಟಿಗೆಗಳಲ್ಲಿ, ಚೌಕಟ್ಟುಗಳಲ್ಲಿ, ರಂಧ್ರಗಳಿಂದ ಕೂಡಿದ ಮಡಕೆಗಳಲ್ಲಿ, ತೂಗು ಬುಟ್ಟಿಗಳಲ್ಲಿ ಆಶಾ ಅವರು ಗಿಡಗಳನ್ನು ಬೆಳೆಸಿದ್ದಾರೆ. 'ಕುಂಡಗಳಿಗೆ ಇಟ್ಟಿಗೆ ಚೂರುಗಳು, ಇದ್ದಿಲು ತುಣುಕುಗಳು, ತೆಂಗಿನ ನಾರು, ಕಲ್ಲುಗಳು ಇತ್ಯಾದಿ ಬೆರೆಯಿಸಿ ತುಂಬಿಸಿ ಆರ್ಕಿಡ್ ಗಿಡ ನೆಡಲಾಗುತ್ತದೆ. ತೇವಾಂಶ ಉಳಿಸಿಕೊಳ್ಳಲಿಕ್ಕಾಗಿ ನಾಲ್ಕು ಐದು ದಿನಗಳಿಗೊಮ್ಮೆ ನೀರು ಪೂರೈಸುತ್ತಿರಬೇಕು' ಎಂದು ಆರ್ಕಿಡ್ ಬೆಳೆಸುವ ಪ್ರಾಥಮಿಕ ಸೂತ್ರಗಳನ್ನು ಆಶಾ ವಿವರಿಸುತ್ತಾರೆ.

ಹಲವು ರಂಗುಗಳೊಂದಿಗೆ ಕಂಗೊಳಿಸುವ ಆರ್ಕಿಡ್‌ಗಳಿಗೆ ಹೆಚ್ಚಿನ ಪೋಷಕಾಂಶ ಬೇಕಾಗುವುದಿಲ್ಲ. ಕಾಂಪೋಸ್ಟ್, ತೆಂಗಿನ ನಾರಿನ ಪುಡಿಯ ಗೊಬ್ಬರ, ಲಘು ಪೋಷಕಾಂಶ ದ್ರಾವಣ ರೂಪದಲ್ಲಿ ನೀಡಿದರೆ ಉಪಯುಕ್ತ. ಹಸಿ ಸಗಣಿಯನ್ನು ನೀರಿನಲ್ಲಿ ಮಿಶ್ರಣಗೊಳಿಸಿ ಗಿಡಗಳಿಗೆ ಪೂರೈಕೆ ಮಾಡಿದರೆ ಪೊಗದಸ್ತಾಗಿ ಬೆಳೆಯುತ್ತವೆ ಎನ್ನುತ್ತಾರೆ ಆಶಾ ಮೇಡಂ.

ಅಂದಹಾಗೆ, ಆಶಾ ಅವರ ಅಲಂಕಾರಿಕ ಸಸ್ಯ–ಪುಷ್ಪಗಳು ಬೆಂಗಳೂರು ಪೇಟೆಯಲ್ಲಿ ಬೇಡಿಕೆ ಕಂಡುಕೊಂಡಿವೆ. ತೀರ್ಥಹಳ್ಳಿ ಕಡೆ ಬರುವವರು ಈ ಆರ್ಕಿಡ್‌ಲೋಕಕ್ಕೂ ಭೇಟಿ ಕೊಡಬಹುದು.

ಪ್ರತಿಕ್ರಿಯಿಸಿ:
feedback@sudha.co.in





